# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಆವಿ/ಜಿಎಲ್-5/ಲೇಸಾವಿ/19/2023-24 ದಿನಾಂಕ:06.06.2023

**ದರಪಟ್ಟಿ ಆಹ್ವಾನ**

**(Box Tender ಮುಖಾಂತರ)**

ಗೆ,

ಮಾನ್ಯರೆ,

**ವಿಷಯ:** ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಸ್ವಚ್ಛತಾ ಸಾಮಗ್ರಿಗಳನ್ನು ಖರೀದಿಸುವ ಸಂಬಂಧ ದರಪಟ್ಟಿ ಕೋರಿ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17.05.2023.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಚೇರಿ ದೈನಂದಿನ ಕೆಲಸ ಕಾರ್ಯಗಳಿಗೆ ಅವಶ್ಯವಿರುವ ಈ ಕೆಳಕಂಡ ಸ್ವಚ್ಛತಾ ಸಾಮಗ್ರಿಗಳನ್ನು ಬೇಡಿಕೆ ಅನುಸಾರ ಸರಬರಾಜು ಮಾಡುವ ಸಂಬಂಧ ಒಂದು ವರ್ಷದ ಅವಧಿಗೆ ದರಪಟ್ಟಿಯನ್ನು Box Tender ಮುಖಾಂತರ ಆಹ್ವಾನಿಸಲಾಗಿದ್ದು, ದಿನಾಂಕ:20.06.2023 ರೊಳಗಾಗಿ ತಮ್ಮ ಕನಿಷ್ಠ ದರವನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯ ಮೇಲೆ "ವಿವಿ ನಿಲಯಕ್ಕೆ ಸ್ವಚ್ಛತಾ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗೆಗೆ" ಎಂಬ ಮೇಲ್ಬರಹದೊಂದಿಗೆ ಕುಲಸಚಿವರ ಕಚೇರಿಯಲ್ಲಿ ಇಡಲಾಗಿರುವ Box ನಲ್ಲಿ ಹಾಕುವುದು.

(ಒಂದು ವರ್ಷದ ಅಂದಾಜು ಮೌಲ್ಯ ರೂ. 4,00,000/-(ನಾಲ್ಕು ಲಕ್ಷ ರೂಪಾಯಿಗಳು ಮಾತ್ರ)).

| Sl.No. | Cleaning Items Details | Specification | Unit | Qty | Enter Brand Name | Rate (Including all tax) |
|---|---|---|---|---|---|---|
| 1 | Bleaching powder | A1 Quality | Per Kg | 1 | | |
| 2 | Bombay broom | Monkey/555 Brand | Each | 1 | | |
| 3 | Coconut brooms | A1 Quality | Each | 1 | | |
| 4 | Dust bin - (Unbreakable) 1 feet size- waste paper basket | A 1 Quality | Each | 1 | | |
| 5 | Dust bin - with cap (Unbreakable) 2 1/2 feet size | A 1 Quality | Each | 1 | | |
| 6 | Dust bin -without cap (Unbreakable) 2 1/2 feet size | A 1 Quality | Each | 1 | | |
| 7 | Dust cleaning plastic ceiling stick | A1 Quality | Each | 1 | | |
| 8 | Floor cleaning mop | A1 Quality | Each | 1 | | |
| 9 | Good Night - Set with Liquid | A1 Quality | Each | 1 | | |
| 10 | Good Night - Liquid | A1 Quality | Each | 1 | | |
| 11 | Odonil Bathroom Air freshner (Blocks) | Odonil | Each | 1 | | |
| 12 | Phenol (5 Ltr can) | A1 Quality | Each | 1 | | |
| 13 | Plastic Bucket for 20 Litre Capacity (Unbreakable) | A1 Quality | Each | 1 | | |
| 14 | Plastic Bucket for 3 Litre Capacity (Unbreakable) | A1 Quality | Each | 1 | | |
| 15 | Plastic Mug (Unbreakable) | A1 Quality | Each | 1 | | |
| 16 | Soap Oil (5 Ltr can) | A1 Quality | Each | 1 | | |

| | | | | | | |
|---|---|---|---|---|---|---|
| 17 | Toilet cleaning acid (5 Ltr Can) | A1 Quality | Each | 1 | | |
| 18 | Urinal Cake (12 nos per Dozen) | A1 Quality | Each | 1 | | |
| 19 | Vim Powder or Equivalent Powder | A1 Quality | Per Kg | 1 | | |
| | | | | | Total Amount Rs. | |

ಮೇಲ್ಕಂಡ ಮಾದರಿಯಲ್ಲಿ ತಮ್ಮ ಸಂಸ್ಥೆಯ ಮುಖಪತ್ರದಲ್ಲಿ ದರವನ್ನು ನಮೂದಿಸಿ ಸಲ್ಲಿಸುವುದು.

**ದರಪಟ್ಟಿಯೊಂದಿಗೆ ಈ ಕೆಳಕಂಡ ದಾಖಲಾತಿಯನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು, ತಪ್ಪಿದ್ದಲ್ಲಿ ಅಂತಹ ದರಪಟ್ಟಿಯನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.**

1. EMD ಮೊತ್ತ ರೂ.8,000/-ಗಳ ಡಿಡಿ ಯನ್ನು ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು ಇವರ ಹೆಸರಿನಲ್ಲಿ ಸಲ್ಲಿಸುವುದು.
2. GST ನೋಂದಣಿದಾರರು ಮಾತ್ರ ದರಪಟ್ಟಿ ಸಲ್ಲಿಸಲು ಅರ್ಹರಾಗಿದ್ದು, ನಕಲು ಪ್ರತಿಯನ್ನು ಸಲ್ಲಿಸತಕ್ಕದ್ದು.
3. PAN Card ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
4. 2022-23ನೇ ಸಾಲಿನಲ್ಲಿ ಯಾವುದೇ ಸರ್ಕಾರಿ ಸಂಸ್ಥೆಗಳು/ವಿಶ್ವವಿದ್ಯಾನಿಲಯಗಳಿಗೆ ಒಂದೇ ಕಾರ್ಯಾದೇಶದಲ್ಲಿ ರೂ.25,000/-ಗಳ ಸ್ವಚ್ಛತಾ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ದೃಢೀಕರಣ ಪತ್ರವನ್ನು ಸಲ್ಲಿಸತಕ್ಕದ್ದು.
5. 2022-23ನೇ ಸಾಲಿನಲ್ಲಿ ತೃಪ್ತಿಕರವಾಗಿ ಯಾವುದೇ ಸರ್ಕಾರಿ ಸಂಸ್ಥೆಗಳು/ವಿಶ್ವವಿದ್ಯಾನಿಲಯಗಳಿಗೆ ಸ್ವಚ್ಛತಾ ಸಾಮಗ್ರಿಗಳನ್ನು ತೃಪ್ತಿಕರವಾಗಿ ಸರಬರಾಜು ಮಾಡಿರುವ ದೃಢೀಕರಣ ಪತ್ರವನ್ನು ಸಲ್ಲಿಸತಕ್ಕದ್ದು.

**ಷರತ್ತುಗಳು:**

1) **ಎಲ್ಲಾ ಸಾಮಗ್ರಿಗಳನ್ನು ಸೇರಿದಂತೆ ಒಟ್ಟಾರೆ ಮೊತ್ತಕ್ಕೆ ಕನಿಷ್ಠ ದರವನ್ನು ನಮೂದಿಸುವ ಸಂಸ್ಥೆಯನ್ನು ಎಲ್-1 ಬಿಡ್‌ದಾರರೆಂದು ಪರಿಗಣಿಸಲಾಗುವುದು.**
2) ಎಲ್-1 ಬಿಡ್‌ದಾರರು ದರ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಟೆಂಡರ್‌ನ ಅಂದಾಜು ಮೌಲ್ಯಕ್ಕೆ ಒಟ್ಟಾರೆ 5% ಭದ್ರತಾ ಠೇವಣಿ ಮೊತ್ತವಾದ 20,000/- ಗಳಲ್ಲಿ ಟೆಂಡರ್ ದಾಖಲಾತಿಯೊಂದಿಗೆ ಸಲ್ಲಿಸಿರುವ ಇ.ಎಂ.ಡಿ ಮೊತ್ತ ರೂ. 8,000/-ಗಳನ್ನು ಕಳೆದು ಉಳಿದ ಮೊತ್ತವಾದ 12,000/-ಗಳ ಡಿಡಿ ಯನ್ನು ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು ಇವರ ಹೆಸರಿನಲ್ಲಿ ಸಲ್ಲಿಸುವುದು.
3) ಎಲ್-1 ಬಿಡ್‌ದಾರರು ಮೂಲ ಉತ್ಪಾದನಾ ಕಂಪನಿಯ ಸ್ವಚ್ಛತಾ ಸಾಮಗ್ರಿಗಳನ್ನೇ(Original Manufacturing Company),ಸರಬರಾಜು ಮಾಡುವುದು. ಸರಬರಾಜು ಮಾಡಿದ ಸಾಮಗ್ರಿಗಳು ನಕಲಿ ಎಂದು ಸಾಬೀತಾದಲ್ಲಿ ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು ಹಾಗೂ ಭದ್ರತಾ ಠೇವಣಿಯನ್ನು ಮತ್ತು ಬಾಕಿ ಇರುವ ಬಿಲ್ಲಿನ ಮೊತ್ತವನ್ನು ಮುಟ್ಟು ಗೋಲು ಹಾಕಿಕೊಳ್ಳಲಾಗುವುದು.
4) ಯಾವುದೇ ಕಾರಣ ನೀಡದೆ ದರಪಟ್ಟಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
5) ಎಲ್-1 ದರವು ಕಾರ್ಯದೇಶ ಹೊರಡಿಸಿದ ದಿನದಿಂದ ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತದೆ ಮತ್ತು ಬೇಡಿಕೆ ಅನುಸಾರ ಸ್ವಚ್ಛತಾ ಸಾಮಗ್ರಿಗಳನ್ನು ಖರೀದಿಸಲಾಗುತ್ತದೆ ಈ ಸಂಬಂಧ ಎಲ್-1 ಬಿಡ್‌ದಾರರು ವಿಶ್ವವಿದ್ಯಾನಿಲಯದೊಂದಿಗೆ ಒಂದು ವರ್ಷದ ಅವಧಿಗೆ ದರ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು.
6) ಕಡ್ಡಾಯವಾಗಿ ದರಪಟ್ಟಿಯಲ್ಲಿ ತಿಳಿಸಿರುವ ಎಲ್ಲಾ ಸಾಮಗ್ರಿಗಳಿಗೂ ದರವನ್ನು ನಮೂದಿಸಬೇಕು, ಅಪೂರ್ಣ ದರಪಟ್ಟಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು.
7) ದರಪಟ್ಟಿಯಲ್ಲಿನ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು.
8) ಸ್ವಚ್ಛತಾ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ ಯಾವುದಾದರು ತಕರಾರು ಉದ್ಭವಿಸಿದರೆ, ಮೈಸೂರು ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಕುಲಸಚಿವ

**ಪ್ರತಿ,**

1. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಡಾ. ನವೀನ್ ಕುಮಾರ್, ವೆಬ್‌ಸೈಟ್ ನೋಡಲ್ ಆಫೀಸರ್, ಕರಾಮುವಿ, ಮೈಸೂರು- ಸದರಿ ದರಪಟ್ಟಿಯ ಮಾಹಿತಿಯನ್ನು ಅಂತಿಮ ದಿನಾಂಕದವರೆಗೂ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸುವುದು.
4. ಕಚೇರಿ ಪ್ರತಿ.